**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ**

ಸಿ.ಸಿ. ನಂ.**5791/2025**

ಫಿರ್ಯಾದುದಾರರು ವಿರುದ್ಧ ಆರೋಪಿ

ಕರ್ನಾಟಕ ಸರ್ಕಾರದ ಪರವಾಗಿ
ಅಬಕಾರಿ ಉಪ ನಿರೀಕ್ಷಕರು,
ಹರಿಹರ ವಲಯದ ಹರಿಹರ

ನೀಲಪ್ಪ ಅರಳಿಕಟ್ಟೆ

**ದೋಷಾರೋಪಣೆ**

ಶ್ರೀಮತಿ ಜ್ಯೋತಿ ಅಶೋಕ ಪತ್ತಾರ, ಬಿ.ಇ., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಹರಿಹರ ಆದ ನಾನು ನಿಮ್ಮನ್ನು ಅಂದರೆ:

ಆರೋಪಿ : ನೀಲಪ್ಪ ಅರಳಿಕಟ್ಟೆ
ತಂದೆ ಗುಡ್ಡಪ್ಪ, ವಃ 46 ವರ್ಷ,
ವಾಸಃ ಜೈ ಬೀಮನಗರ ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲ.

**ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:**

ದಿನಾಂಕ: 31.05.2025 ರಂದು ಮಾನ್ಯ ಅಬಕಾರಿ ಉಪ ಆಯುಕ್ತರು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ನಿರ್ದೇಶನದ ಮೇರೆಗೆ ಮತ್ತು ಅಬಕಾರಿ ಉಪ ಅಧೀಕ್ಷಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಇವರ ಮಾರ್ಗದರ್ಶನದಲ್ಲಿ ಅಬಕಾರಿ ಉಪ ನಿರೀಕ್ಷಕರು-1, ಹರಿಹರ ವಲಯ - ಅವರು ತಮ್ಮ ಸಿಬ್ಬಂದಿಗಳೊಂದಿಗೆ ಹರಿಹರ ತಾಲ್ಲೂಕಿನ ಜೈ ಬೀಮನಗರ ಗ್ರಾಮದಲ್ಲಿ ಸಂಜೆ 6.00 ಗಂಟೆಗೆ ಗಸ್ತು ನಡೆಸುತ್ತಿರುವಾಗ ಬಂದ ಬಾತ್ಮಿಯ ಮೇರೆಗೆ ಬೀಮನಗರ ಗ್ರಾಮದಲ್ಲಿ ಆರೋಪಿಯಾದ ನೀನು ನಿಮಗೆ ಸೇರಿದ ಕಿರಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿಯ ಮೇರೆಗೆ ಸಂಜೆ:6.30 ಗಂಟೆಯ ಸಮಯದಲ್ಲಿ ತಮ್ಮ ಇಲಾಖೆಯ ಸಿಬ್ಬಂದಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಆರೋಪಿಗೆ ಸೇರಿದ ಕಿರಾಣಿ ಅಂಗಡಿ ಮೇಲೆ ಅಬಕಾರಿ ದಾಳಿಯನ್ನು ಮಾಡಲಾಗಿ ದಾಳಿಯ ಸಮಯದಲ್ಲಿ ಸದರಿ ಕಿರಣಿ ಅಂಗಡಿ ಪ್ರವೇಶ ದ್ವಾರವು ದಕ್ಷಿಣಾಭಿಮುಖವಾಗಿದ್ದು ಕಿರಾಣಿ ಅಂಗಡಿಯ ಗಲ್ಲಾಪೆಟ್ಟಿಗೆ ಟೇಬಲ್ ಕೆಳಗೆ ಸ್ವಾಪ್ ಪಾನ್ ಮಸಾಲ ಚೀಲದಲ್ಲಿ 90 ಮಿಲಿಯ 25 ಮದ್ಯ ತುಂಬಿದ ಒರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾಪ್ಯಾಕ್ ಗಳು ಹಾಗೂ 90 ಮಿಲಿಯ 25 ಮದ್ಯ ತುಂಬಿದ ಹೈವರ್ಡ್ಸ್ ವಿಸ್ಕಿ ಟೆಟ್ರಾಪ್ಯಾಕ್ ಗಳು ಒಟ್ಟು 4.500 ಲೀಟರ್ ಅಕ್ರಮ ಮದ್ಯವನ್ನು ಮಾರಾಟದ ಉದ್ದೇಶಕ್ಕೆ ದಾಸ್ತಾನು ಮಾಡಿರುವುದು ಕಂಡುಬಂದಿರುತ್ತದೆ. ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 14, 15 ರ ಉಪಬಂಧಗಳನ್ನು ಉಲ್ಲಂಘಿಸಿ, ಕಲಂ 32(1), 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಆರೋಪಿಯಾದ ನೀನು ಮೇಲ್ಕಂಡ ಅಪರಾಧಗಳಿಗೆ ಇದೇ ನ್ಯಾಯಾಲಯದಲ್ಲಿ ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

ದಿನಾಂಕಃ

18/03/16.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ, ಹರಿಹರ.